**All India Radio: Bangalore**
**National Bulletin In Kannada**
**18.01.2025  13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**18.01.2025  13.10 p.m.**
**<><><><>**

ಮುಖ್ಯಾಂಶಗಳು

1. ಕೇಂದ್ರಾಡಳಿತ ಪ್ರದೇಶಗಳ ೫೦ ಸಾವಿರಕ್ಕೂ ಹೆಚ್ಚು ಗ್ರಾಮಗಳ ಗ್ರಾಮಸ್ಥರಿಗೆ ಸ್ವಾಮಿತ್ವ ಯೋಜನೆಯಡಿ ೬೫ ಲಕ್ಷಕ್ಕೂ ಹೆಚ್ಚು ಆಸ್ತಿ ಹಕ್ಕು ಪತ್ರ ವಿತರಿಸಿದ ಪ್ರಧಾನಿ ನರೇಂದ್ರ ಮೋದಿ
2. ಪ್ರಯಾಗ್‌ರಾಜ್ ಮಹಾ ಕುಂಭಮೇಳ; ತ್ರಿವೇಣಿ ರಸ್ತೆಯಲ್ಲಿ ಕೇಂದ್ರದ ವಿವಿಧ ಸಚಿವಾಲಯಗಳಿಂದ ಮಳಿಗೆ ಸ್ಥಾಪನೆ
3. ೨೦೨೪ರ ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿ ಬಿಹಾರದ ಪಾಟ್ನಾದಲ್ಲಿಂದು ಸಮಾಲೋಚನೆ
4. ಬಿಹಾರದ ಅಂಚೆ ಇಲಾಖೆಯ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ  ಪರಿಚಯಿಸಲು ಸಜ್ಜು
5. ಐಎಸ್‌ಎಲ್ ಫುಟ್ಬಾಲ್: ಇಂದು ಹೈದರಾಬಾದ್ ಎಫ್‌ಸಿ ಮತ್ತು ಬೆಂಗಳೂರು ಎಫ್‌ಸಿ ತಂಡ ಮುಖಾಮುಖಿ

<><><><>

ಧಾನಿ ನರೇಂದ್ರ ಮೋದಿ ಅವರು ಇಂದು ಹತ್ತು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ ೫೦ ಸಾವಿರಕ್ಕೂ ಹೆಚ್ಚು ಗ್ರಾಮಗಳ ಗ್ರಾಮಸ್ಥರಿಗೆ ಸ್ವಾಮಿತ್ವ  ಯೋಜನೆಯಡಿ ೬೫ ಲಕ್ಷಕ್ಕೂ ಹೆಚ್ಚು ಆಸ್ತಿ  ಹಕ್ಕು  ಪತ್ರಗಳನ್ನು  ವಿಡಿಯೋ  ಕಾನ್ಫರೆನ್ಸಿಂಗ್ ಮೂಲಕ ವಿತರಿಸಿದರು. ಈ ಕುರಿತು ಒಂದು ವರದಿ  ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮೀಣ ಪ್ರದೇಶಗಳ ಭೂ ಸಮೀಕ್ಷೆ ಮತ್ತು  ಮ್ಯಾಪಿಂಗ್ ಮಾಡಿ, ಗ್ರಾಮಸ್ಥರ ಕುಟುಂಬಗಳಿಗೆ 'ತಮ್ಮ ಆಸ್ತಿ ಹಕ್ಕಿನ ಪತ್ರ ನೀಡುವ ಕಾರ್ಯಕ್ರಮ ಸ್ವಾಮಿತ್ವ ಯೋಜನೆಯಾಗಿದೆ. ಈ ಮೂಲಕ ಗ್ರಾಮೀಣ ಭಾರತದ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದು ಆಸ್ತಿಗಳನ್ನು ಬಳಸಿ ಹಣಗಳಿಕೆ ಸುಗಮಗೊಳಿಸುವ, ಬ್ಯಾಂಕ್ ಸಾಲಗಳ ಮೂಲಕ ಸಾಂಸ್ಥಿಕ ಸಾಲ ಪಡೆಯಲು ಅನುವು

ಮಾಡಿಕೊಡುವ ಆಸ್ತಿ-ಸಂಬಂಧಿತ ವಿವಾದಗಳನ್ನು ತಗ್ಗಿಸುವ ಜೊತೆಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ ಮೌಲ್ಯಮಾಪನಗಳು ಮತ್ತು ಆಸ್ತಿ ತೆರಿಗೆ ಸಂಗ್ರಹವನ್ನು ಬೆಂಬಲಿಸುತ್ತದೆ.

<><><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ತ್ರಿವೇಣಿ ರಸ್ತೆಯಲ್ಲಿ ವಿವಿಧ ಕೇಂದ್ರ ಸಚಿವಾಲಯಗಳು ಹಾಗೂ ಇಲಾಖೆಗಳು ಪ್ರದರ್ಶನಗಳನ್ನು ಏರ್ಪಡಿಸಿವೆ. ಕೇಂದ್ರ ಸರ್ಕಾರದ ಸಾಧನೆಗಳು, ಯೋಜನೆಗಳು, ನೀತಿಗಳು ಮತ್ತು ಇತರೆ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಡಿಜಿಟಲ್ ಪ್ರದರ್ಶನ ಮಂಟಪ ಸ್ಥಾಪಿಸಿದೆ. ಈ ಪ್ರದರ್ಶನದಲ್ಲಿ ಹಲವು ಯೋಜನೆಗಳ ಬಗ್ಗೆ ಎಲ್‌ಇಡಿ ಟಿವಿ ಪರದೆ, ಹೋಲೋಗ್ರಾಫಿಕ್ ಸಿಲಿಂಡರ್‌ಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಪಿಎಂ ಇಂಟರ್ನ್‌ಶಿಪ್ ಯೋಜನೆಯ ಡಿಜಿಟಲ್ ಪ್ರದರ್ಶನದಲ್ಲಿ ವಿವಿಧ ಕಂಪನಿಗಳು ಹಾಗೂ ಉದ್ಯಮಗಳಲ್ಲಿ ಈ ಯೋಜನೆಯ ಪ್ರಕ್ರಿಯೆಯನ್ನು ಸಾರ್ವಜನಿಕರಿಗೆ ವಿವರಿಸಲಾಗುತ್ತಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರದರ್ಶನದಲ್ಲಿ ಪ್ರವಾಹ, ಭೂಕಂಪ, ಶೀತಗಾಳಿ, ಕಾಡ್ಗಿಚ್ಚು, ಬೆಂಕಿ ಅನಾಹುತ ಸೇರಿದಂತೆ ಇನ್ನಿತರ ಪ್ರಾಕೃತಿಕ ಮತ್ತು ಇತರ ವಿಪತ್ತುಗಳನ್ನು ಎದುರಿಸಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ತಿಳಿಸಲಾಗುತ್ತದೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪುಸ್ತಕ ಪ್ರಕಾಶನ ವಿಭಾಗದಿಂದ ಮಳಿಗೆ ಸ್ಥಾಪಿಸಲಾಗಿದ್ದು, ಅಲ್ಲಿ ಹಲವು ಶ್ರೇಷ್ಠ ವ್ಯಕ್ತಿಗಳ ಜೀವನಚರಿತ್ರೆ ಮತ್ತು ಪ್ರಮುಖ ವಿಷಯಾಧಾರಿತ ಪುಸ್ತಕಗಳು ಸಾರ್ವಜನಿಕರಿಗೆ ಲಭ್ಯವಿದೆ. ಇನ್ನು ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಸ್ಥಾಪಿಸಿರುವ ಮಳಿಗೆಯಲ್ಲಿ ಸಿರಿಧಾನ್ಯ ಉತ್ಪನ್ನ ಮತ್ತು ತರಕಾರಿ ಬೀಜಗಳನ್ನು ಇಡಲಾಗಿದೆ. ಈ ಎಲ್ಲ ಮಳಿಗೆಗಳನ್ನು ವೀಕ್ಷಿಸಲು ಸಹಸ್ರಾರು ಮಂದಿ ಯಾತ್ರಿಕರು ಆಗಮಿಸುತ್ತಿದ್ದು, ಇಲ್ಲಿ ನೀಡಲಾಗುತ್ತಿರುವ ಮಾಹಿತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಈ ಮಳಿಗೆಗಳು ಸಾರ್ವಜನಿಕ ವೀಕ್ಷಣೆಗೆ ಉಚಿತವಾಗಿ ಫೆಬ್ರವರಿ ೨೬ರ ವರೆಗೆ ಮುಕ್ತವಾಗಿರಲಿವೆ.

ಈ ಕುರಿತು ಒಂದು ವರದಿ

ಪ್ರಯಾಗರಾಜ್‌ನ ಮಹಾಕುಂಭನಗರದಲ್ಲಿರುವ ಭಕ್ತರು ಮತ್ತು ಯಾತ್ರಿಕರು ಈಗ ಆಕಾಶವಾಣಿಯ ಕುಂಭವಾಣಿ ಸುದ್ದಿ ಬುಲೆಟಿನ್‌ಗಳನ್ನು ಸಾರ್ವಜನಿಕ ವಿಳಾಸ ವ್ಯವಸ್ಥೆಯಿಂದ ನೇರಪ್ರಸಾರದಲ್ಲಿ

ಕೇಳಬಹುದು. ಇಂದು ಬೆಳಿಗ್ಗೆ ೮.೩೦ ಕ್ಕೆ ಮಹಾಕುಂಭನಗರದಲ್ಲಿರುವ ಸಾರ್ವಜನಿಕ ವಿಳಾಸ ವ್ಯವಸ್ಥೆಯ ಮೂಲಕ ಕುಂಭವಾಣಿ ಸುದ್ದಿಯನ್ನು ಪ್ರಸಾರ ಮಾಡಲಾಯಿತು. ಕುಂಭವಾಣಿ ಸುದ್ದಿ ಸಂಚಿಕೆಯನ್ನು ಬೆಳಿಗ್ಗೆ ೮.೩೦ ರಿಂದ ೮.೪೦ ರವರೆಗೆ, ಮಧ್ಯಾಹ್ನ ೨.೩೦ ರಿಂದ ೨.೪೦ ರವರೆಗೆ ಮತ್ತು ಸಂಜೆ ೮.೩೦ ರಿಂದ ೮.೪೦ ರವರೆಗೆ ಪ್ರಸಾರ ಮಾಡಲಾಗುತ್ತದೆ. ಸುದ್ದಿ ಸಂಚಿಕೆಗಳನ್ನು ತರಂಗಾಂತರ ೧೦೩.೫ ಮೆಗಾ ಹರ್ಡ್ಸ್ ಮತ್ತು ವೇವ್ಸ್ ಓಟಿಟಿ ಪ್ಲಾಟ್‌ಫಾರ್ಮ್‌ನಲ್ಲಿಯೂ ಕೇಳಬಹುದು. ಈ ಚಾನಲ್ ಫೆಬ್ರವರಿ ೨೮ ರವರೆಗೆ ಸುದ್ದಿ ಮತ್ತು ಇತರ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ.

<><><>

೨೦೨೪ರ ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿ ಬಿಹಾರದ ಪಾಟ್ನಾದಲ್ಲಿಂದು ಸಮಾಲೋಚನೆ ನಡೆಸಲಿದೆ. ಹಿರಿಯ ಸಂಸದ ಜಗದಾಂಬಿಕಾ ಪಾಲ್ ಅವರ ನೇತೃತ್ವದ ಸಮಿತಿಯು ಬಿಹಾರದ ಶಿಯಾ ಮತ್ತು ಸುನ್ನಿ ವಕ್ಫ್ ಮಂಡಳಿಗಳ ಪ್ರತಿನಿಧಿಗಳು ಸೇರಿದಂತೆ ವಿವಿಧ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಿದೆ. ಈ ಸಮಾಲೋಚನೆಗಳು ದೇಶಾದ್ಯಂತ ಲಕ್ಷಾಂತರ ನೋಂದಾಯಿತ ವಕ್ಫ್ ಆಸ್ತಿಗಳ ನಿರ್ವಹಣೆಯನ್ನು ನಿಯಂತ್ರಿಸುವ ವಕ್ಫ್ ಕಾಯ್ದೆಗೆ ಪ್ರಸ್ತಾವಿತ ತಿದ್ದುಪಡಿಗಳನ್ನು ಪರಿಷ್ಕರಿಸುವ ಗುರಿಯನ್ನು ಹೊಂದಿವೆ.

<><><>

ಬಿಹಾರದ ಅಂಚೆ ಇಲಾಖೆಯು ಪಾರ್ಸೆಲ್ ವಿತರಣೆ, ಬುಕಿಂಗ್, ಲಾಜಿಸ್ಟಿಕ್ಸ್ ಮತ್ತು ಗ್ರಾಹಕ-ಕೇಂದ್ರಿತ ಕಾರ್ಯಾಚರಣೆಗಳು ಸೇರಿದಂತೆ ತನ್ನ ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆ ಅನ್ನು ಪರಿಚಯಿಸಲು ಸಜ್ಜಾಗಿದೆ. ಆಕಾಶವಾಣಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಹಾರದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಅನಿಲ್ ಕುಮಾರ್, ಕೃತಕ ಬುದ್ಧಿಮತ್ತೆ ಏಕೀಕರಣವು ಅಂಚೆ ವ್ಯವಸ್ಥೆಯ ದಕ್ಷತೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ಹೇಳಿದ್ದಾರೆ. ಮುಂದಿನ ಹಣಕಾಸು ವರ್ಷದಲ್ಲಿ ಈ ನಾವೀನ್ಯತೆಯನ್ನು ಪ್ರಾರಂಭಿಸುವ ನಿರೀಕ್ಷೆಯಿದೆ. ಪ್ರಸ್ತುತ ಪೈಲಟ್ ಪರೀಕ್ಷೆಗಳು ನಡೆಯುತ್ತಿವೆ. ಹೆಚ್ಚುವರಿಯಾಗಿ, ಇಲಾಖೆಯು ಡಿಜಿಟಲ್ ವಿಳಾಸ ಮತ್ತು ಡಿಜಿಟಲ್ ಪಿನ್ ಕೋಡ್ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಕೃತಕ ಬುದ್ಧಿಮತ್ತೆ ಬಳಕೆಯು ಅಂಚೆ ವಿತರಣಾ ಪ್ರಕ್ರಿಯೆಯಲ್ಲಿ ಕ್ರಾಂತಿಯನ್ನುಂಟು ಮಾಡುವ ನಿರೀಕ್ಷೆಯಿದೆ.

<><><>

ಮಿಷನ್ ಸ್ಕಾಟ್  ಯಶಸ್ಸಿಗೆ ಭಾರತೀಯ ಬಾಹ್ಯಾಕಾಶ ನವೋದ್ಯಮಿಗಳನ್ನು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಪ್ರಧಾನಿಯವರು ಬಾಹ್ಯಾಕಾಶದ ಅರಿವನ್ನು ಹೆಚ್ಚಿಸುವಲ್ಲಿ ಬೆಳೆಯುತ್ತಿರುವ ಭಾರತೀಯ ಬಾಹ್ಯಾಕಾಶ ಉದ್ಯಮದ ಪ್ರಮುಖ ಕೊಡುಗೆ ಇದು ಎಂದು ಹೇಳಿದ್ದಾರೆ. ಬಾಹ್ಯಾಕಾಶ ಕ್ಯಾಮೆರಾ ಫಾರ್ ಆಬ್ಜೆಕ್ಟ್ ಟ್ರ್ಯಾಕಿಂಗ್ ಅನ್ನು ಪ್ರತಿನಿಧಿಸುವ ಮಿಷನ್ ಸ್ಕಾಟ್ ವಿಶ್ವದ ಮೊದಲ ವಾಣಿಜ್ಯ ಬಾಹ್ಯಾಕಾಶ ಪರಿಸ್ಥಿತಿ ಜಾಗೃತಿ ಉಪಗ್ರಹವಾಗಿದೆ. ಇದು ಸುಧಾರಿತ ದಕ್ಷತೆಯೊಂದಿಗೆ ಕಡಿಮೆ ಭೂಮಿಯ ಕಕ್ಷೆಯನ್ನು ಮೇಲ್ವಿಚಾರಣೆ ಮಾಡಲು ಅನುವು ಮಾಡಿಕೊಡುತ್ತದೆ.

<><><><>

ಕೋಲ್ಕತ್ತಾದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಪ್ರಕರಣದ ಬಹುನಿರೀಕ್ಷಿತ ತೀರ್ಪನ್ನು ಇಂದು ಸೀಲ್ಡಾ ನ್ಯಾಯಾಲಯವು ಪ್ರಕಟಿಸಲಿದೆ.  ತನಿಖಾ ಸಂಸ್ಥೆ ಸಿಬಿಐ ಈ ಪ್ರಕರಣದಲ್ಲಿ ಸಂಜಯ್ ರೈ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ.

<><><><>

೭೦ ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಒಟ್ಟು ಒಂದು ಸಾವಿರದ ೫೨೧ ನಾಮಪತ್ರ ಸಲ್ಲಿಕೆಯಾಗಿವೆ.  ಕೇಂದ್ರ ಚುನಾವಣಾ ಆಯೋಗ ನೀಡಿರುವ ಮಾಹಿತಿ ಪ್ರಕಾರ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದ ನಿನ್ನೆ ೬೮೦ ನಾಮಪತ್ರಗಳು ಸಲ್ಲಿಕೆಯಾಗಿವೆ. ನವದೆಹಲಿ ವಿಧಾನಸಭಾ ಕ್ಷೇತ್ರದಿಂದ ಅತಿ ಹೆಚ್ಚು ಅಂದರೆ ೨೯ ಅಭ್ಯರ್ಥಿಗಳು ೪೦ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ಬಿಜೆಪಿಯ ಪರ್ವೇಶ್ ವರ್ಮಾ ಮತ್ತು ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ಈ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ. ಕಲ್ಕಾಜಿ ಕ್ಷೇತ್ರಕ್ಕಾಗಿ ೧೮ ಅಭ್ಯರ್ಥಿಗಳು ೨೮ ನಾಮಪತ್ರಗಳನ್ನು ಸಲ್ಲಿಸಿದ್ದು, ಆಮ್ ಆದ್ಮಿ ಪಕ್ಷದ ನಾಯಕಿ ಹಾಗೂ ದೆಹಲಿ ಮುಖ್ಯಮಂತ್ರಿ ಅತಿಷಿ, ಬಿಜೆಯ ರಮೇಶ್ ಬಿಧೂರಿ ಮತ್ತು ಕಾಂಗ್ರೆಸ್‌ನ ಅಲ್ಕಾಲಂಬಾ ಸ್ಪರ್ಧಿಸುತ್ತಿರುವ ಪ್ರಮುಖರಾಗಿದ್ದಾರೆ ಇಂದು ನಾಮಪತ್ರಗಳ ಪರಿಶೀಲನೆ ಪ್ರಗತಿಯಲ್ಲಿದ್ದು, ಇದೇ ೨೦ ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನವಾಗಿದೆ.

<><><><>

ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಒಟ್ಟು ೧೨ ಭಾರತೀಯ ಪ್ರಜೆಗಳು ಸಂಘರ್ಷದಲ್ಲಿ ಇಲ್ಲಿಯವರೆಗೆ ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ೧೬ ಜನರು ಕಾಣೆಯಾಗಿದ್ದಾರೆ. ನಿನ್ನೆ

ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ೯೬ ಭಾರತೀಯ ಪ್ರಜೆಗಳು ಹಿಂತಿರುಗಿದ್ದಾರೆ ಮತ್ತು ರಷ್ಯಾದ ಸೇನೆಯಿಂದ ಬಿಡುಗಡೆಗೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

<><><>

ಮುಂದಿನ ಎರಡು ಹಣಕಾಸು ವರ್ಷಗಳಲ್ಲಿ, ಭಾರತದ ಬೆಳವಣಿಗೆಯ ದರ ೬.೫ ಇರಲಿದೆ ಎಂದು ಮುನ್ಸೂಚನೆಯನ್ನು ಶೇಕಡ ೬.೫ ರಲ್ಲಿಯೇ ಉಳಿಸಿಕೊಂಡಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ಅಂದಾಜಿಸಿದೆ. ಐಎಂಎಫ್ ಪ್ರಕಾರ, ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆಗಳಲ್ಲಿ ಅತ್ಯಂತ ವೇಗದ ಬೆಳವಣಿಗೆಯ ದರವನ್ನು ಕಾಯ್ದುಕೊಂಡಿದೆ. ಈ ಮಧ್ಯೆ, ೨೦೨೫ ಮತ್ತು ೨೦೨೬ರಲ್ಲಿ ಜಾಗತಿಕ ಬೆಳವಣಿಗೆ ದರ ಶೇಕಡ ೩.೩ರಷ್ಟಿರಲಿದೆ ಎಂದು ಐಎಂಎಫ್ ಅಂದಾಜಿಸಲಾಗಿದೆ.

<><><>

ನಿನ್ನೆ ಜೆಮ್‌ಶೆಡ್‌ಪುರದ ಜೆಆರ್‌ಡಿ ಟಾಟಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್‌ನಲ್ಲಿ, ಜೆಮ್‌ಶೆಡ್‌ಪುರದ ಎಫ್‌ಸಿ ಮತ್ತು ಮೋಹನ್ ಬಗಾನ್ ಸೂಪರ್ ಜೈಂಟ್ ನಡುವಿನ ಪಂದ್ಯವು ೧-೧ ಗೋಲಿನ ಮೂಲಕ  ಡ್ರಾದಲ್ಲಿ ಅಂತ್ಯಗೊಂಡಿತು. ಈ ಡ್ರಾದೊಂದಿಗೆ, ಜೆಮ್‌ಶೆಡ್‌ಪುರ ಎಫ್‌ಸಿ ಎರಡನೇ ಸ್ಥಾನಕ್ಕೆ ಏರಿತು, ಮೋಹನ್ ಬಗಾನ್ ಎಸ್‌ಜಿಗಿಂತ ಎಂಟು ಅಂಕಗಳ ಹಿಂದಿದೆ. ಇಂದು, ಹೈದರಾಬಾದ್‌ನ ಜಿಎಂಸಿ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಹೈದರಾಬಾದ್ ಎಫ್‌ಸಿ ತಂಡ ಬೆಂಗಳೂರು ಎಫ್‌ಸಿಯನ್ನು ಎದುರಿಸಲಿದೆ ಪಂದ್ಯ ಸಂಜೆ ೫:೦೦ ಗಂಟೆಗೆ ಆರಂಭವಾಗಲಿದೆ. ಈ ನಡುವೆ  ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿಯನ್ನು ಎದುರಿಸಲಿದೆ ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>